# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - SATURDAY 4-6-2022



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಬ್ರೆಜಿಲ್‌ನ ಒಣ ಹವೆಯಿಂದ ಕಾಫಿ ದರ ತೀವ್ರ ಹೆಚ್ಚಳ

1/6/2022 ಅರೆಬಿಕಾ ಕಾಫಿ ಫ್ಯೂಚರ್ ದರ ಶೇಕಡಾ 3.55(+8.20) ಹಾಗೂ ರಾಬೆಸ್ಟಾ ಕಾಫಿ 1.42 ಶೇಕಡಾ(+30) ಹೆಚ್ಚಳಗೊಂಡಿದೆ. ಅರೆಬಿಕಾ ಕಾಫಿ ದರ 3 ತಿಂಗಳ ಗರಿಷ್ಠ ಹಾಗೂ ರಾಬೆಸ್ಟಾ ಮೂರುವರೆ ವಾರಗಳ ಗರಿಷ್ಠ ಮಟ್ಟಕ್ಕೇರಿದೆ. ಬ್ರೆಜಿಲ್‌ನ ಒಣ ಹವೆಯಿಂದ ಅಲ್ಲಿನ ಉತ್ಪಾದನೆ ಇಳಿಕೆಯ ನಿರೀಕ್ಷೆಯಿಂದ ಕಾಫಿ ದರ ತೀವ್ರ ಹೆಚ್ಚಳವಾಗಿದೆಯೆನ್ನಲಾಗಿದೆ. ಕೊಲಂಬಿಯಾದ ಕಾಫಿ ರಫ್ತು 18 ಶೇಕಡಾ ಇಳಿಕೆಯಾಗಿದೆಯೆಂದು (8,45,000 ಚೀಲಗಳು) ಅಲ್ಲಿನ ಕಾಫಿ ಉತ್ಪಾದಕರ ಫೆಡರೇಶನ್ ವರದಿ ತಿಳಿಸಿದೆ. USDA ಬ್ರೆಜಿಲ್‌ನ ಕಾಫಿ ರಫ್ತು 2021-22 ರಲ್ಲಿ 27 ಶೇಕಡಾ ಇಳಿಕೆಯಾಗಿ 33.2 ಮಿಲಿಯನ್ ಚೀಲಗಳಾಗುವ ಪ್ರಾಜೆಕ್ಟ್ ಮಾಡಿದೆ. (2020-21 ರಲ್ಲಿ 45.67 ಮಿಲಿಯನ್ ಚೀಲಗಳಯ) CONAB 2022 ರಲ್ಲಿ ಬ್ರೆಜಿಲ್‌ನ ಉತ್ಪಾದನೆ +16.8 ಶೇಕಡಾ ಹೆಚ್ಚಳವಾಗಿ 55.7 ಮಿಲಿಯನ್ ಚೀಲಗಳಾಗಲಿದೆಯೆಂದು ಜನವರಿಯಲ್ಲಿ ವರದಿ ಮಾಡಿದೆ. ಸಿಟಿ ಗ್ರೂಪ್ 2022-23 ರಲ್ಲಿ ಜಾಗತಿಕ ಕಾಫಿ ಮಾರುಕಟ್ಟೆ 2021-22 ರಲ್ಲಿದ್ದ 7.3 ಮಿಲಿಯನ್ ಚೀಲಗಳ ಗಳ ಕೊರತೆಯಿಂದ 3.5 ಮಿಲಿಯನ್ ಚೀಲಗಳ ಮಿಗತೆಯ ಪ್ರಾಜೆಕ್ಟ್ ಮಾಡಿದೆ. ವಿಯೆಟ್ನಾಂ ರಾಬೆಸ್ಟಾ ಕಾಫಿ ರಫ್ತು ಮೇ ತಿಂಗಳಲ್ಲಿ 24.2 ಶೇಕಡಾ(ಹಿಂದಿನ ವರ್ಷದ ಈ ಅವಧಿ) ಹೆಚ್ಚಳ ದಾಖಲಿಸಿ 889000 MT ಗಳಾಗಿದೆಯೆಂದು ಅಲ್ಲಿನ ಜನರಲ್ ಸ್ಟಾಟಿನಿಕ್ಸ್ ಆಫೀಸ್ ವರದಿ ಮಾಡಿದೆಯೆನ್ನಲಾಗಿದೆ.

## ಮೇ ಯಲ್ಲಿ ಮಲೇಶಿಯನ್ ಪಾಮೆಣ್ಣೆ ರಫ್ತು 20.5 ಶೇಕಡಾ ಹೆಚ್ಚಳ

ಮಲೇಶಿಯನ್ ಪಾಮೆಣ್ಣೆ ರಫ್ತು ಎಪ್ರಿಲ್ ನಿಂದ (1,103,093 ಟನ್) ಮೇ ತಿಂಗಳಲ್ಲಿ 20.5 ಶೇಕಡಾ ಹೆಚ್ಚಳಗೊಂಡು 1,329,186 ಟನ್‌ಗಳಾಗಿವೆಯೆಂದು ಕಾರ್ಗೋ ಸರ್ವೇಯಿಂದ SGS ಹೇಳಿದೆಯೆನ್ನಲಾಗಿದೆ. ಸೋಯ ಎಣ್ಣೆ ಹಾಗೂ ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ಸ್ವಲ್ಪ ಮಟ್ಟಿನ ಇಳಿಕೆ ಕಂಡಿದೆ. ಕೂಲಿಕಾರ್ಮಿಕರ ಲಭ್ಯತೆ ಇಳಿಕೆಯಿಂದ ಮಲೇಶಿಯನ್ ಪಾಮೆಣ್ಣೆ ಉತ್ಪಾದನೆ ಈ ವರ್ಷ ಇಳಿಕೆಯಾಗಬಹುದೆಂದು ಅಂದಾಜು ದರ ಹೆಚ್ಚಿನ ಇಳಿಕೆಗೆ ತಡೆಯಾಗಿದೆ.

## ಜಾಗತಿಕ ಎಣ್ಣೆ ಬೀಜಗಳ ವರದಿಯಲ್ಲಿ 2021-22 ಸಸ್ಯಜನ್ಯ ತೈಲ ಜಾಗತಿಕ ಉತ್ಪಾದನೆ 212.04 ಮಿಲಿಯನ್ ಟನ್, 0.3% ಹೆಚ್ಚಳ

ಯು.ಎಸ್ ಕೃಷಿ ವಿಭಾಗ(USDA) ಅಂದಾಜಿನಂತೆ 2021-22 ರಲ್ಲಿ ಜಾಗತಿಕ ಖಾದ್ಯತೈಲ ಉತ್ಪಾದನೆ 0.3 ಶೇಕಡಾ ಹೆಚ್ಚಳದೊಂದಿಗೆ 212.04 ಮಿಲಿಯನ್ ಟನ್‌ಗಳಾಗಬಹುದೆನ್ನಲಾಗಿದೆ. ಹಾಗೇಯೇ ಬಳಕೆ ಜಾಗತಿಕವಾಗಿ 208.92 ಮಿಲಿಯನ್ ಟನ್‌ಗಳಾಗಲಿದೆಯೆನ್ನಲಾಗಿದೆ. ವರ್ಷಾಂತ್ಯದ ದಾಸ್ತಾನು 8 ಶೇಕಡಾ ಹೆಚ್ಚಳವಾಗಿ 26.07 ಮಿಲಿಯನ್ ಟನ್‌ಗಳಾಗಬಹುದೆನ್ನಲಾಗಿದೆ. ಹಿಂದಿನ 5 ತಿಂಗಳಿನಿಂದ ಭಾರತದ ಸೋಯಾಬೀನ್ ಎಣ್ಣೆ ಆಮದು 30% ಹೆಚ್ಚಳವಾಗಿದೆಯೆನ್ನಲಾಗಿದೆ.

## ಬಿಹಾರದಲ್ಲಿ ಪೂರೈಕೆ ಇಳಿಕೆಯಿಂದ ಜೋಳ ದರ ಹೆಚ್ಚಳ

ಬಿಹಾರದ ಪೂರ್ನಿಯಾ ಮಾರುಕಟ್ಟೆಯಲ್ಲಿ ಪೂರೈಕೆ ಇಳಿಕೆಯಿಂದ ಜೋಳ ದರ ಹೆಚ್ಚಳವಾಗಿದೆ. ಪೂರೈಕೆ 150000 ಚೀಲಗಳಿಂದ 700000 ಚೀಲಕ್ಕೆ ಇಳಿಕೆಯಾಗಿರುವುದು ದರ ಹೆಚ್ಚಳಕ್ಕೆ ಪ್ರಮುಖ ಕಾರಣವೆನ್ನಲಾಗಿದೆ. ಕರ್ನಾಟಕದಲ್ಲಿ ಜೋಳ ದರ ಹೆಚ್ಚಳವಾಗಿದೆಯೆನ್ನಲಾಗಿದೆ. ಗೋಧಿ ದರಗಳು ಪ್ರಮುಖ ಮಾರುಕಟ್ಟೆಗಳಲ್ಲಿ ಸ್ಥಿರವಿದೆಯೆನ್ನಲಾಗಿದೆ.

## ಜೂನ್ ತಿಂಗಳು ತನಕ 8.5 ಮಿಲಿಯನ್ ಟನ್ ಸಕ್ಕರೆ ರಫ್ತು, ಅಕ್ಟೋಬರ್ ತನಕ ಇನ್ನೂ 1.5 ಮಿಲಿಯನ್ ಟನ್ ಸಕ್ಕರೆ ನಿರೀಕ್ಷೆ

ಜೂನ್ 1, 2022 ತನಕ ಭಾರತದಿಂದ 8.5 ಮಿಲಿಯನ್ ಟನ್ ಸಕ್ಕರೆ ರಫ್ತಾಗಿದೆಯೆನ್ನಲಾಗಿದ್ದು, ಮುಂದೆ ಅಕ್ಟೋಬರ್ 2022 ತನಕ ಇನ್ನೂ ಹೆಚ್ಚುವರಿ 1.5 ಮಿಲಿಯನ್ ಟನ್ ಸಕ್ಕರೆ ಸರಕಾರದಿಂದ ಪರವಾನಗಿ ಪಡೆದು ಮಾಡಬಹುದೆಂದು ಅಂದಾಜಿಸಲಾಗಿದೆ. ಅಂತರಾಷ್ಟ್ರೀಯ ದರ ಆಕರ್ಷಕವಿರುವುದರಿಂದ ಕೆಲವು ಮಿಲ್‌ಗಳು ರಫ್ತು ಪರವಾನಗಿ ಪಡೆದು ರಫ್ತು ಮಾಡಲು ಚಿಂತನೆಯಲ್ಲಿವೆಯೆನ್ನಲಾಗಿದೆ.